**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/25/ಐಎನ್‌ಎಸ್(3)/2016 / 4689

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ: 14.02.2017

**ಜ್ಞಾಪನ**

ವಿಷಯ: ನವೆಂಬರ್-ಡಿಸೆಂಬರ್ 2016ರ ಡಿಪ್ಲೋಮಾ ಪರೀಕ್ಷೆಯ ವಿಷಯವಾರು ಫಲಿತಾಂಶದ ವಿಶ್ಲೇಷಣೆಯ ಬಗ್ಗೆ.

ಉಲ್ಲೇಖ: ಇದೇ ಸಮಸಂಖ್ಯೆಯ ಪತ್ರ ದಿನಾಂಕ: 23.01.2017

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಶೇಕಡ 50ಕ್ಕಿಂತಲೂ ಕಡಿಮೆ ಫಲಿತಾಂಶ ಬಂದಿರುವ ಥಿಯರಿ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಸೂಚಿಸಿರುವ ನಮೂನೆಯಲ್ಲಿ ಎಲ್ಲಾ ವಿಭಾಗಗಳ ವಿಷಯವಾರು ಮಾಹಿತಿಯನ್ನು ಕ್ರೋಢೀಕರಿಸಿ, ದಿನಾಂಕ: 28-01-2017ರೊಳಗಾಗಿ ಅಪ್‌ಲೋಡ್ ಮಾಡಿ ಕಳುಹಿಸಲು ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಸೂಚಿಸಲಾಗಿತ್ತು. ಆದರೆ ಇಲ್ಲಿಯವರೆವಿಗೂ ಕೆಲವು ಸಂಸ್ಥೆಗಳು ಸದರಿ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಈ ಬಗ್ಗೆ ತಮ್ಮ ಸಂಸ್ಥೆಯ ಮಾಹಿತಿಯನ್ನು ಕೂಡಲೇ www.dte.kar.nic.inನಲ್ಲಿ ನಮೂದಿಸಿರುವ ಲಿಂಕ್‌ಅನ್ನು ಉಪಯೋಗಿಸಿ ಸಲ್ಲಿಸಲು ಮತ್ತು ಒಂದೊಮ್ಮೆ ನವೆಂಬರ್-ಡಿಸೆಂಬರ್ 2016ರ ಡಿಪ್ಲೋಮಾ ಪರೀಕ್ಷೆಯಲ್ಲಿ ಯಾವ ವಿಷಯದಲ್ಲೂ 50%ಗಿಂತ ಕಡಿಮೆ ಫಲಿತಾಂಶ ಇಲ್ಲದಿದ್ದ ಪಕ್ಷದಲ್ಲಿ **"ಯಾವ ವಿಷಯದಲ್ಲೂ 50%ಗಿಂತ ಕಡಿಮೆ ಫಲಿತಾಂಶ ಬಂದಿರುವುದಿಲ್ಲ"**ವೆಂಬ ಮಾಹಿತಿಯನ್ನು ತಿಳಿಸಲು ಹಾಗೂ ಸದರಿ ಮಾಹಿತಿಯ ಹಾರ್ಡ್‌ಕಾಪಿಯನ್ನು ಜಂಟಿ ನಿರ್ದೇಶಕರು(ತನಿಖೆ) ಇವರಿಗೆ ತುರ್ತಾಗಿ ಕಳುಹಿಸಲು ಸೂಚಿಸಲಾಗಿದೆ.

**ನಿರ್ದೇಶಕರು**

**ಪ್ರತಿ:**

1. ಜಂಟಿ ನಿರ್ದೇಶಕರು (ಆಡಳಿತ/ಪರೀಕ್ಷೆ/ಸಿಡಿಸಿ/ಡಿವಿಪಿ/ತನಿಖೆ)
2. ನಿರ್ದೇಶಕರ ಆಪ್ತ ಶಾಖೆ.
3. ಈ-ಗವರ್ನನ್ಸ್ ಸಂಯೋಜಕರಿಗೆ, ನಿರ್ದೇಶನಾಲಯದ ಅಂತರ್ಜಾಲದಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ